ಕಾಗೆ ಮತ್ತು ಹೂಜಿ

✍️ ಶ್ರೀವಲ್ಲಿ ರೈ ಮಾರ್ಟೆಲ್



ಒಮ್ಮೆ ಎಲ್ಲೆಡೆ ಬರಗಾಲ ಉಂಟಾಯಿತು. ಪಕ್ಷಿಗಳಿಗೆ ಕುಡಿಯಲು ನೀರು ಸಿಗದೆ ಬಹಳ ಕಷ್ಟವಾಯಿತು. ಅಂತಹ ಸಮಯದಲ್ಲಿ ಬಾಯಾರಿಕೆಯಿಂದ ಬಳಲುತ್ತಿದ್ದ ಒಂದು ಕಾಗೆಗೆ ಸ್ವಲ್ಪ ನೀರಿದ್ದ ಎತ್ತರವಾದ, ಕಿರಿದಾದ ಬಾಯಿ ಇರುವ ಹೂಜಿಯೊಂದು ಕಾಣಿಸಿತು. ಕಾಗೆ ಎಷ್ಟೇ ಪ್ರಯತ್ನಿಸಿದರೂ ಅದರ ಕೊಕ್ಕು ನೀರಿನವರೆಗೆ ತಲುಪಲಿಲ್ಲ. ಕಾಗೆ ತಾನು ನೀರಿಲ್ಲದೆ ಸತ್ತು ಹೋಗಬಹುದೆಂಬ ಭಯದಿಂದ ಒಂದು ಉಪಾಯವನ್ನು ಮಾಡಿತು.

ಅದು ಸುತ್ತಮುತ್ತಲಿದ್ದ ಸಣ್ಣ ಸಣ್ಣ ಕಲ್ಲುಗಳನ್ನು ತನ್ನ ಕೊಕ್ಕಿನಿಂದ ಎತ್ತಿಕೊಂಡು ಒಂದೊಂದಾಗಿ ಹೂಜಿಯೊಳಗೆ ಹಾಕಲು ಪ್ರಾರಂಭಿಸಿತು. ಪ್ರತಿಯೊಂದು ಕಲ್ಲನ್ನು ಹಾಕಿದಾಗಲೂ ನೀರಿನ ಮಟ್ಟ ಸ್ವಲ್ಪ ಸ್ವಲ್ಪವಾಗಿ ಮೇಲೇರತೊಡಗಿತು. ಕೊನೆಗೆ ನೀರು ಹೂಜಿಯ ಬಾಯಿಯ ಸಮೀಪಕ್ಕೆ ಬಂದಿತು. ಕಾಗೆ ಸಂತೋಷದಿಂದ ನೀರನ್ನು ಕುಡಿದು ತನ್ನ ಬಾಯಾರಿಕೆಯನ್ನು ನೀಗಿಸಿಕೊಂಡಿತು.

ಕಷ್ಟದ ಸಮಯದಲ್ಲಿ ಬುದ್ಧಿವಂತಿಕೆಯಿಂದ ಯೋಚಿಸಿ ಕಾರ್ಯನಿರ್ವಹಿಸಿದರೆ, ಕಷ್ಟಗಳಿಂದ ಹೊರಬರಲು ದಾರಿ ಸಿಗುತ್ತದೆ.